# ಮೈಸೂರು ಜಿಲ್ಲೆಯ

# ಸಂಕ್ಷಿಪ್ತ ಪಕ್ಷಿನೋಟ

ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

Phone No : 0821-2490025, E-mail ID ddpimys@gmail.com

## ಸರ್ವ ಶಿಕ್ಷಣ ಅಭಿಯಾನ – ಮೈಸೂರು

ಕರ್ನಾಟಕ ರಾಜ್ಯದ ಸಾಂಸ್ಕೃತಿಕ ರಾಜಧಾನಿ, ಅರಮನೆಗಳ ಬೀಡು, ಸುಸಂಸ್ಕೃತ ಜನರ ನೆಲೆವೀಡು ಮೈಸೂರು. ಈ ಸಾಂಸ್ಕೃತಿಕ ಜಿಲ್ಲೆಗೆ 8 ತಾಲೂಕುಗಳಿದ್ದು, ಶೈಕ್ಷಣಿಕವಾಗಿ 9 ವಲಯಗಳಾಗಿ ವಿಭಜಿಸಲಾಗಿದೆ. ಜಿಲ್ಲೆಯಲ್ಲಿ 2,334 ವಸತಿ ಪ್ರದೇಶಗಳನ್ನೊಳಗೊಂಡ 1,535 ಕಂದಾಯ ಗ್ರಾಮಗಳು 6321 ಚ.ಕಿ.ಮೀ. ವಿಸ್ತಾರದಲ್ಲಿ ನೆಲೆಗೊಂಡಿದೆ. ಈ ವಿಸ್ತಾರ ಭೂ ಪ್ರದೇಶದಲ್ಲಿ 30,01,127 ಜನರು ವಾಸಿಸುತ್ತಿದ್ದು, ಇವುಗಳಲ್ಲಿ 15,11,600 ಪುರುಷರು ಹಾಗೂ 14,89,527 ಮಹಿಳೆಯರು ವಾಸಿಸುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕಾವೇರಿ, ಕಪಿಲಾ, ನುಗು ಮತ್ತು ತಾರಕ ನದಿ ಹರಿಯುತ್ತಿದ್ದು ಸುತ್ತಮುತ್ತಲಿನ ಕೃಷಿ ಚಟುವಟಿಕೆಗೆ ಆಸರೆಯಾಗಿದೆ. ಚಾಮುಂಡಿ ಬೆಟ್ಟ ಮತ್ತು ನಂಜನಗೂಡು ಪ್ರಸಿದ್ಧ ಚುಂಚನಕಟ್ಟೆ ಜಲಪಾತ, ಕಾಕನಕೋಟೆ ನಾಗರಹೊಳೆ ಅಭಯಾರಣ್ಯ, ಬೈಲುಕುಪ್ಪೆ ಸುವರ್ಣ ಮಂದಿರ, ತಲಕಾಡು, ಸೋಮನಾಥಪುರ, ಚಾಮರಾಜೇಂದ್ರ ಮೃಗಾಲಯ, ಮೈಸೂರು ಅರಮನೆ, ಜಗನ್ಮೋಹನ ಅರಮನೆ ಕಾರಂಜಿ ಕೆರೆ, ಪ್ರಮುಖ ಪ್ರವಾಸಿ ಆಕರ್ಷಣೆಗಳಾಗಿದೆ. ಮೈಸೂರಿನಲ್ಲಿ ನಡೆಯುವ ನಾಡಹಬ್ಬ ದಸರಾ ವಿಶ್ವ ಪ್ರಸಿದ್ಧವಾಗಿದೆ. ಇವುಗಳಲ್ಲದೆ ಶ್ರೀಗಂಧ, ಮೈಸೂರು ರೇಷ್ಮೆ, ಮೈಸೂರು ಮಲ್ಲಿಗೆ, ಮೈಸೂರು ಪಾಕ್ ಸ್ಥಳದ ಹಿರಿಮೆಯನ್ನು ಹೆಚ್ಚಿಸಿವೆ. ಮೈಸೂರಿನ 55000 ಯೋಗಾಪಟುಗಳು ಒಟ್ಟಿಗೆ ಯೋಗಾಸನ ಪ್ರದರ್ಶಿಸಿ ಗಿನ್ನಿಸ್ ದಾಖಲೆ ನಿರ್ಮಿಸಿದ್ದು ಇದರಲ್ಲಿ ಹೆಚ್ಚಿನಲ್ಲಿ ಶಾಲಾ ಮಕ್ಕಳು ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿದೆ.

ಮೈಸೂರು ಜಿಲ್ಲೆ, ಮೂರು ಲೋಕಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿದ್ದು 11 ವಿಧಾನ ಸಭಾ ಕ್ಷೇತ್ರಗಳು, 5 ವಿಧಾನ ಪರಿಷತ್ ಸದಸ್ಯರು, 49 ಜಿಲ್ಲಾ ಪಂಚಾಯತ್ ಕ್ಷೇತ್ರಗಳು, 1 ಮಹಾನಗರಪಾಲಿಕೆ, 2 ನಗರಸಭೆ, 6 ಪುರಸಭೆ, ಹಾಗೂ 235 ಗ್ರಾಮಪಂಚಾಯತಿಗಳನ್ನು ಒಳಗೊಂಡಿದೆ.

ಮೈಸೂರು ಅರಸರ ಅಪಾರ ಕೊಡುಗೆಗಳನ್ನು ಹೊಂದಿರುವ ಜಿಲ್ಲೆಯಾಗಿದ್ದು 4 ವಿಶ್ವ ವಿದ್ಯಾಲಯಗಳ ಮೂಲಕ ಸಾಹಿತ್ಯ, ಶೈಕ್ಷಣಿಕ, ವಿಜ್ಞಾನ, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣದ ಬೆಳವಣಿಗೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಮೈಸೂರಿನ ಮಹಾರಾಜರು ಮಹಾರಾಣಿ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದವರಲ್ಲಿ ಮೊದಲಿಗರಾಗಿದ್ದಾರೆ. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ರಾಷ್ಟ್ರ ಕವಿ ಕುವೆಂಪುರವರು ಮೈಸೂರಿನಲ್ಲಿ ನೆಲೆಗೊಂಡಿದ್ದರು. ಮೈಸೂರಿಗೆ ಗರಿಯೆನ್ನುವಂತೆ ರಾಷ್ಟ್ರಮಟ್ಟದ ಸಂಸ್ಥೆಗಳಾದ ಸಿ.ಎಫ್.ಟಿ.ಆರ್.ಐ, ಡಿ.ಎಫ್.ಆರ್.ಎಲ್, ಸಿಪೆಟ್, ಆಯಷ್ ಸಿ.ಐ.ಎ.ಎಲ್ ನೋಟು ಮುದ್ರಣ ಘಟಕ ಮುಂತಾದುವುಗಳಿದೆ.

2011ರ ಜನಗಣತಿಯ ಪ್ರಕಾರ ಮೈಸೂರು ಜಿಲ್ಲೆಯ ಸಾಕ್ಷರತಾ ಪ್ರಮಾಣ 72.56 ರಷ್ಟು ಇದ್ದು ಇದರಲ್ಲಿ ಪುರಷರ ಸಾಕ್ಷರತಾ ಪ್ರಮಾಣ 78.44 ಮಹಿಳಾ ಸಾಕ್ಷರತಾ ಪ್ರಮಾಣ 66.59 ಆಗಿರುತ್ತದೆ.

ಜಿಲ್ಲೆಯಲ್ಲಿ ಒಟ್ಟು 6 ರಿಂದ 16 ವರ್ಷ ವಯೋಮಾನದ 224048 ಗಂಡು ಮಕ್ಕಳು ಹಾಗೂ 211996 ಹೆಣ್ಣು ಮಕ್ಕಳು ಒಟ್ಟು 436044 ಮಕ್ಕಳಿದ್ದು, ಈ ಮಕ್ಕಳಿಗೆ ಸಂವಿಧಾನದ ರೀತ್ಯಾ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮೂಲಭೂತ ಹಕ್ಕನ್ನು ಪೂರೈಸಲು ರಾಜ್ಯ ಸರ್ಕಾರ ಕಟಿಬದ್ಧವಾಗಿ ನಿಂತಿದೆ. ಈ ಮಕ್ಕಳ ಶಿಕ್ಷಣಕ್ಕಾಗಿ 1093 ಕಿರಿಯ ಹಾಗೂ 1585 ಹಿರಿಯ ಪ್ರಾಥಮಿಕ ಶಾಲೆಗಳು, 725 ಪ್ರೌಢಶಾಲೆಗಳು ಒಟ್ಟು 3412 ಶಾಲೆಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತ ಬಂದಿದೆ. ಇವುಗಳಲ್ಲಿ 2144 ಶಾಲೆಗಳು ಶಿಕ್ಷಣ ಇಲಾಖೆಯಿಂದ ಯಶಸ್ವಿಯಾಗಿ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಉಸ್ತುವಾರಿ ಮತ್ತು ಮೇಲ್ವಿಚಾರಣೆಗೆ ಹಾಗೂ ಶಿಕ್ಷಣ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ 10 ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, 9 ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಹಾಗೂ 176 ಕ್ಲಸ್ಟರ್ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ.

ಸರಕಾರಿ ಹಾಗೂ ಅನುದಾನಿತ ಶಾಲೆಗಳ ಪ್ರತಿ ಮಕ್ಕಳಿಗೂ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಹಾಗೂ ಮಧ್ಯಾಹ್ನದ ಉಪಹಾರ ಹಾಗೂ 8ನೇ ತರಗತಿ ಮಕ್ಕಳಿಗೆ ಬೈಸಿಕಲ್ ಒದಗಿಸಲಾಗಿದೆ.

2018-19ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮಗೊಳಿಸಲು ಕ್ರಿಯಾಯೋಜನೆ ರೂಪಿಸಲಾಗಿದೆ.

**ಮೈಸೂರು ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ಮಾಹಿತಿ**

**ಉಪನಿರ್ದೇಶಕರ ಕಛೇರಿ ಸಿಬ್ಬಂದಿಯ ವಿವರ:**

| ಕ್ರ.ಸಂ. | ಹುದ್ದೆಯ ವಿವರ | ಮಂಜೂರಾತಿ | ಕರ್ತವ್ಯ ನಿರ್ವಹಿಸುವವರು | ಖಾಲಿ |
|---|---|---|---|---|
| 1. | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2. | ಶಿಕ್ಷಣಾಧಿಕಾರಿಗಳು | 2 | 2 | 0 |
| 3. | ಉಪಯೋಜನಾ ಸಮನ್ವಯಾಧಿಕಾರಿ ಎಸ್.ಎಸ್.ಎ | 1 | 1 | 0 |
| 4. | ಉಪಯೋಜನಾ ಸಮನ್ವಯಾಧಿಕಾರಿ ಆರ್.ಎಂ.ಎಸ್.ಎ. | 1 | 1 | 0 |
| 5. | ಶಿಕ್ಷಣಾಧಿಕಾರಿಗಳು ಮ. ಉ. ಯೋ. | 1 | 1 | 0 |
| 6. | ವಿಷಯ ಪರಿವೀಕ್ಷಕರು | 6 | 5 | 1 |
| 7. | ಸಹಾಯಕ ಯೋಜನಾ ಸಮನ್ವಯಾಧಿಕಾರಿ ಎಸ್.ಎಸ್.ಎ. | 2 | 2 | 0 |
| 8. | ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ | 1 | 0 | 1 |
| 9. | ಪತ್ರಾಂಕಿತ ಸಹಾಯಕರು | 1 | 1 | 0 |
| 10. | ಅಧೀಕ್ಷಕರು | 2 | 2 | 0 |
| 11. | ಲೆಕ್ಕ ಅಧೀಕ್ಷಕರು ಉ.ನಿ.ಕಛೇರಿ | 1 | 1 | 0 |
| 12. | ಲೆಕ್ಕ ಅಧೀಕ್ಷಕರು ಎಸ್.ಎಸ್.ಎ. | 1 | 1 | 0 |
| 13. | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 14. | ಪ್ರ.ದ.ಸ | 14 | 14 | 0 |
| 15. | ಆಪ್ತ ಸಹಾಯಕರು | 1 | 0 | 1 |
| 16. | ಪ್ರ.ದ.ಸ ಎಸ್.ಎಸ್.ಎ | 2 | 2 | 0 |
| 17. | ದ್ವಿ.ದ.ಸ | 5 | 5 | 0 |
| 18. | ಸಿ.ಸಿ.ಟಿ. ಎಸ್.ಎಸ್.ಎ | 1 | 1 | 0 |
| 19. | ಬೆರಳಚ್ಚುಗಾರ | 2 | 1 | 1 |
| 20. | ಡಿ.ಐ.ಇ.ಆರ್.ಟಿ. ಎಸ್.ಎಸ್.ಎ | 0 | 1 | 0 |
| 21. | ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್ ಎಸ್.ಎಸ್.ಎ | 1 | 1 | 0 |

| | | | | |
|---|---|---|---|---|
| 22. | ಲೆಕ್ಕ ಸಹಾಯಕರು, ಎಸ್.ಎಸ್.ಎ. | 0 | 1 | 0 |
| 23. | ಡಾಟಾ ಎಂಟ್ರಿ ಆಪರೇಟರ್ ಎಸ್.ಎಸ್.ಎ | 2 | 2 | 0 |
| 24. | ಡಿ.ದರ್ಜೆ ಸಹಾಯಕರು | 7 | 7 | 0 |
| 25. | ವಾಹನ ಚಾಲಕರು | 1 | 1 | 0 |
| 26. | ಡಿ.ದರ್ಜೆ ಸಹಾಯಕರು ಎಸ್.ಎಸ್.ಎ | 2 | 2 | 0 |
| | ವಾಹನ ಚಾಲಕರು ಎಸ್.ಎಸ್.ಎ | 1 | 1 | 1 |

| ಕ್ರ.ಸಂ. | ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|---|
| 1 | ಸರ್ಕಾರಿ | 1912 | 232 | 2144 |
| 2 | ಸಮಾಜ ಕಲ್ಯಾಣ ಇಲಾಖೆ | 63 | 42 | 105 |
| 3 | ಅನುದಾನಿತ | 141 | 138 | 279 |
| 4 | ಅನುದಾನ ರಹಿತ | 555 | 315 | 870 |
| 5 | ಕೇಂದ್ರ | 7 | 7 | 14 |
| | ಒಟ್ಟು | 2678 | 734 | 3412 |

**ದಾಖಲಾತಿ ವಿವರ**

| ತರಗತಿ | ಸರ್ಕಾರಿ | ಸಮಾಜ ಕಲ್ಯಾಣ ಇಲಾಖೆ | ಅನುದಾನಿತ | ಅನುದಾನ ರಹಿತ | ಕೇಂದ್ರ | ಒಟ್ಟು |
|---|---|---|---|---|---|---|
| 1 ರಿಂದ 5ನೇ ತರಗತಿ | 89256 | 1704 | 19326 | 108568 | 1854 | 220708 |
| 6 ರಿಂದ 8ನೇ ತರಗತಿ | 57456 | 4507 | 17319 | 51188 | 1195 | 131665 |
| 9 ರಿಂದ 10ನೇ ತರಗತಿ | 31894 | 1679 | 18417 | 30812 | 869 | 83671 |
| ಒಟ್ಟು | 178606 | 7890 | 55062 | 190568 | 3918 | 436044 |

**ಶಿಕ್ಷಕರ ಹುದ್ದೆಗಳು ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ**

| ವಿವರ | ಮಂಜೂರಾತಿ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 7150 | 6779 | 371 |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು | 2306 | 1958 | 344 |
| ಒಟ್ಟು | 2306 | 1958 | 344 |

**2017-18ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲಿ ಅತಿಥಿ ಶಿಕ್ಷಕರ ನೇಮಕಾತಿ**

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 371 ಹುದ್ದೆಗಳಲ್ಲಿ 317 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ ಹಾಗೂ 16 ರಿಜರ್ವ ಶಿಕ್ಷಕರನ್ನು ನೇಮಿಸಲಾಗಿದೆ.
2. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 344 ಹುದ್ದೆಗಲ್ಲ 50 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ
3. 2017-18ನೇ ಸಾಲಿಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷರು (ಎ.ಜಿ.ಟಿ) 264 ಹುದ್ದೆಗಳನ್ನು ಭರ್ತಿಮಾಡುವ ಕುರಿತು ಕ್ರಮ ಕೈಗೊಳ್ಳಲಾಗಿದೆ.

ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ ವಿವರ

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಶೇಕಡವಾರು ಫಲಿತಾಂಶ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2016 | 38499 | 32940 | 85.56 | 8 |
| 2017 | 37503 | 27014 | 72.03 | 21 |

ಉಪನಿರ್ದೇಶಕರು (ಆಡಳಿತ) ಹಾಗೂ
ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ,
ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವ ಶಿಕ್ಷಣ ಅಭಿಯಾನ
ಮೈಸೂರು ಜಿಲ್ಲೆ, ಮೈಸೂರು